6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ

ಬೆಂಗಳೂರು ನಗರ

ಸಿ ಸಿ ಸಂಖ್ಯೆಃ 240/2014

ಪಿರ್ಯಾದುದಾರರು ರಾಜ್ಯ ಪರಃ : ಆಡುಗೋಡಿ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು : : ಆ1) ಶಕುಂತಲಾ
ಆ2) ಶ್ರೀರಾಮಚಂದ್ರಪ್ಪ
ಆ3) ಪ್ರಸಾದ್
ಆ4) ಹರೀಶ್

ಃದೋಷಾರೋಪಣೆಃ

ನಾನು ಶ್ರೀಮತಿ ಎಂ.ಲತ ಕುಮಾರಿ, ಎಂ.ಎ. ಎಲ್.ಎಲ್.ಎಂ., 6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಆದ ನಾನು ಈ ಕೆಳಕಂಡಂತೆ ನಿಮ್ಮ ಮೇಲೆ ಈ ದೋಷಾರೋಪಣೆ ಹೊರಿಸುತ್ತೇನೆ. ಏನೆಂದರೆಃ

ಮೇಲ್ಕಂಡ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ದಿನಾಂಕ 04.06.2012 ರಂದು ಸಾಕ್ಷಿ-2 ರವರ ಗಂಡನಾದ ಸುಬ್ರಮಣಿ ಎಂಬುವವನು ಯಾರಿಗೂ ಹೇಳದೆ ಮೊದಲನೆ ಮದುವೆಯ ವಿಷಯವನ್ನು ಬಚ್ಚಿಟ್ಟು ಎ1 ಆರೋಪಿಯನ್ನು ಪ್ರೀತಿಸಿ ಮದುವೆಯಾದ ವಿಚಾರದಲ್ಲಿ ಹೊಸಕೋಟೆ ಠಾಣೆಯಲ್ಲಿ ಒಬ್ಬರಿಗೊಬ್ಬರು ಬಗೆಹರಿಸಿಕೊಂಡ ಮೇಲೆ ಮದುವೆಯ ವಿಷಯದಲ್ಲಿ ಅಸಮಾನಗೊಂಡ ಆರೋಪಿಗಳು ವೈಮನಸ್ಸಿನಿಂದ ಅದೇ ದಿನ ಸಂಜೆ ಸುಮಾರು 07.30 ಸಮಯದಲ್ಲಿ ಆಡುಗೋಡಿ ಪೋಲಿಸ್ ಕ್ವಾಟ್ರಸ್ಸ್ ಜಿ ಬ್ಲಾಕ್ ಮನೆ ನಂ.13 ಪಿರ್ಯಾದುದಾರರ ಮನೆಗೆ ಏಕಾಏಕಿ ಅತಿಕ್ರಮ ಪ್ರವೇಶ ಮಾಡಿ ಜಗಳ ತೆಗೆದು, ಕೈಗಳಿಂದ ಗುದ್ದಿ ನೋವುಂಟು ಮಾಡಿ , ಅವಾಚ್ಯಶಬ್ದಗಳಿಂದ ಬೈದು ಕೊಲೆಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿ ಮತ್ತು ಎ4 ಆರೋಪಿಯು ಸಾಕ್ಷಿ-1 ರವರ ಸೀರೆಯನ್ನು ಎಳೆದಾಡಿ ಕುಪ್ಪಸವನ್ನು ಹರಿದು ಮಾನಕ್ಕೆ ಕುಂದುಂಟು ಮಾಡಿರುವ

ಕಾರಣ ನೀವುಗಳು ಭಾದಂಸ ಕಲಂ 448, 323, 504, 506 ರೆ ವಿ 34 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

6ನೇ ಅ ಮು ಮ ದಂ
ಬೆಂಗಳೂರು

ಪ್ರ 1) ಮೇಲಿನ ದೋಷಾರೋಪಣೆ ಕುರಿತು ನಿಮಗೆ ಓದಿ ಹೇಳಿದ್ದು ತಿಳಿಯಿತು?

ಉತ್ತರಃ ಎ1)

ಎ2)

ಎ3)

ಎ4)

ಪ್ರ 2) ಈ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೋಷಾರೋಪಣೆ ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆ ನಡೆಸಬೇಕು ಎನ್ನುತ್ತೀರಾ?

ಉತ್ತರಃ ಎ1)

ಎ2)

ಎ3)

ಎ4)

**(ಮೇಲ್ಕಾಣಿಸಿದ ಆರೋಪಿಗೆ ನನ್ನ ಹಾಜರಾತಿಯಲ್ಲಿ ನಾನೇ ಖುದ್ದು ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡದಲ್ಲಿ ಓದಿ ಹೇಳಿ ಅವರು ಕೊಟ್ಟಿರುವ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ)**

ದಿನಾಂಕಃ 6ನೇ ಅ ಮು ಮ ದಂ

ಬೆಂಗಳೂರು